Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 30/2023

ಫ್ರಾ.ಸಾ. 1 ಚಾ.ಸಾ. 15

| | | |
|---|---|---|
| ಹೆಸರು | : | ಮಂಜಮ್ಮ |
| ತಂದೆಯ ಹೆಸರು | : | ಚಂದ್ರಶೇಖರ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಸ್ಟಾಫ ನರ್ಸ |
| ವಾಸ | : | ಸುರಪೂರ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 09-01-2026**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ಚಾಸಾ: 1 ನನ್ನ ತಂದೆ. ಚಾಸಾ: 16 ಮತ್ತು 17 ಗೊತ್ತು. ಚಾಸಾ: 18 ರಿಂದ 21 ಪೊಲಿಸು ಪರಿಚಯ ಇರುತ್ತಾರೆ. ಈ ಪ್ರಕರಣ ಇಬ್ಬರೂ ಆರೋಪಿತರು ಗೊತ್ತು.

2. ನಾನು ಈ ಪ್ರಕರಣ ದಾಖಲಿಸರು 1 ತಿಂಗಳ ಹಿಂದೆ ನಾನು ಶಿರಡಿ ಸಾಯಿ ಆಸ್ಪತ್ರೆ ಬೆಂಗಳೂರಿನಲ್ಲಿ ಸ್ಟಾಫ ನರ್ಸ ಎಂದು ಕರ್ತವ್ಯ ನಿರ್ವಹಿಸುತ್ತಿದೆ. ನಾನು ರಜೆಯ ಮೇಲೆ ನಮ್ಮ ಊರಾದ ಶಹಾಪುರ ತಾಲೂಕಿನ ಇಬ್ರಾಹಿಮಪುರಕ್ಕೆ ಬಂದಿದ.

3. ದಿ: 23-07-2020 ರಂದು ದಿನಪತ್ರಿಕೆಯಲ್ಲಿ ಯಾದಿಗಿರಿ ಜಿಲ್ಲೆಯ ಶಹಾಪೂರ ತಾಲೂಕು ಆರೋಗ್ಯ ಇಲಾಖೆಯಲ್ಲಿ 45 ಹುದ್ದೆಗಳಿಗೆ ಅರ್ಜಿ ಕರೆದಿದ್ದು ಸ್ಟಾಫ ನರ್ಸ ಗಾಗಿ 18 ಹುದ್ದೆ ಇದ್ದು. ಅದೆ ದಿನ ನಾನು ಯಾದಗಿರಿಯ ಡಿ ಎಚ್ ಓ ಕಛೇರಿಗೆ ಬಂದು ಅರ್ಜಿ ಸಲ್ಲಿಸಿ ಅದರ ಜೊತೆಗೆ ನನ್ನ 10 ನೇ ಅಂಕಪಟ್ಟ, ಪಿ ಯು ಸಿ ಮತ್ತು ಜೆ ಎನ್ ಎಮ್ ಅಂಕ ಪಟ್ಟಿ ನಕಲುಗಳು ಜಾತಿ ಆದಾಯ ಪತ್ರ, 371 ಜೆ ಎಲ್ಲಾ ನಕಲು ದಾಖಲೆಗಳನ್ನು ಹಚ್ಚಿ ಸದರಿ ಡಿ ಎಚ್ ಓ ಕಛೇರಿಯಲ್ಲಿ ಸಲ್ಲಿಸಿದ್ದೆ .

4. ದಿ: 01-08-2020 ರಂದು ಡಿ ಎಚ್ ಓ ಕಛೆರಿಯಿಂದ ದಿ: 03-08-2020 ರಂದು ಇಂಟರವ್ಯ ಇದೆ ಎಂದು ನನ್ನ ಮೊಬೈಲಗೆ ಕರೆ ಬಂದಿತ್ತು. ಅದರಂತೆ ದಿ: 03-08-2020 ರಂದು ನಾನು ಇಂಟರವ್ಯಗಾಗಿ ಡಿ ಎಚ್ ಓ ಕಛೆರಿಗೆ ಬಂದಿದ್ದು , ಅಲ್ಲಿ ಒಬ್ಬೊರಿಗೆ ಇಂಟರವ್ಯಕುರಿತು ಡಿ ಎಚ್ ಓ ರವರು ಗ್ರೌಂಡ ಫ್ಲೊರನಲ್ಲಿ

ಡಿ ಎಚ್ ಓ ರವರು ಕೊಠಡಿಗೆ ಹೋದ ಮೇಲೆ ಅಲ್ಲಿ 1 ನೇ ಆರೋಪಿತರಾದ ಡಾ. ಮಲ್ಲನ ಗೌಡ ಪಾಟಿಲ ರವರು ಇದ್ದು ಅವರು ಎಲ್ಲಿ ಎಲ್ಲಿ ಕೆಲಸ ಮಾಡ್ಡುತ್ತಿರಿ ಏನೆನೂ ಕೆಲಸ ಮಾಡುತ್ತಿರಿ ಎಂದು ಕೆಳಿದಾಗ ಏಕ್ಸಿಡೆಂಟ ಕೆಸ ಪಾಯಿಸನ ಕೆಸ ಎಂದು ಹೇಳಿದೆ. ಆಗ ಅವರು ಪಾಯಿಸನ್ ಕೇಸ ಬಂದರೆ ಏನೂ ಮಾಡುತ್ತಿರಿ ಎಂದು ಕೆಳಿದಾಗ ನಾನು ರೈಸ ಟ್ಯುಬ ಹಾಕಿ ಸ್ಟಮಕ ವಾಶ್ ಕೊಟ್ಟು ಐಬಿ ಲೈನ್ಸ ಸ್ಟಾರ್ಟ ಮಾಡಿ ಪೆಷಂಟ ಕಂಡಿಷನ ನೊಡಿ ಐ ಸಿಯುಗೆ ಶಿಷ್ಟ ಮಾಡುತ್ತಿವಿ ಅಂತಾ ಹೇಳಿದೆ. ಯಾವ ಇಂಜಕ್ಷನ ಕೊಡುತ್ತಿರಿ ಅಂತಾ ಕೆಳಿದರು ಅಟ್ರೊಪೆನ ಇಂಜಕ್ಷನ ಕೊಡುತ್ತಿನಿ ಅಂತಾ ಹೇಳಿದೆ. ನಂತರ ಸರಿ ಓಕೆ ಹೊಗಮ್ಮ ಅಂತಾ ಹೇಳಿ ಕಳುಹಿಸಿದರು.

5. ದಿನಾಂಕ: 05/08/2020 ರಂದು, ಇಂಟರವಿವ್ ಏನಾಯ್ತು ಅಂತಾ ಕೇಳುವ ಕುರಿತು ಯಾದಗಿರಿಗೆ ಬಂದು ಶ್ರೀ ಎಂ.ಎಸ್. ಪಾಟೀಲ ಡಿ.ಹೆಚ್.ಓ ರವರಿಗೆ ಬೇಟಿ ಮಾಡಿದಾಗ, ಅವರು ಪಕ್ಕದ ರೂಮಿನಲ್ಲಿರುವ ಶ್ರೀ ಸಿದ್ದನಗೌಡ ಪಾಟೀಲ ಇವರೊಂದಿಗೆ, ಮಾತಾಡ್ತೀ ಅಂತಾ ಹೇಳಿ ಕಳಿಸಿದ್ರೂ, ಅವರು ಕರೋನಾ ಡ್ಯೂಟಿ ಮಾಡಾಕೆ ಇಂಟ್ರೆಸ್ಟ ಇದೆ ಇಲ್ಲಾ ಅಂತಾ ಕೇಳಿದ್ದರು. ಇದೆ ಸರ್, ಅಂತಾ ಅಂದಾಗ, ಅದೆಲ್ಲ ಮುಂದೆ ಪಿ.ಹೆಚ್.ಸಿ ಸೆಂಟರದಲ್ಲಿ ಹಾಕಿದ್ರೆ ನಿಮಗಿಷ್ಟ ಇದೆ ಇಲ್ಲಾ ಅಂತಾ ಕೇಳಿದ್ರು, ನನಗಿಷ್ಟ ಇದ ಮಾಡತೀನಿ ಅಂತಾ ಹೇಳಿದೆ, ಆಯಿತು, ನಾಳೆ 30,000/-ದುಡ್ಡು ತೆಗೆದುಕೊಂಡು ಬನ್ನಿ ಅಪಾಯಿಂಟಮೆಂಟ ಆರ್ಡರ ಕೊಡತೀವಿ, ಅಂತಾ ಹೇಳಿದ್ದರು ನಾನು ಮನೆಯಲ್ಲಿ ವಿಚಾರ ಮಾಡಿ ತಿಳಿಸ್ತೀನಿ ಅಂತಾ ಹೇಳಿ ಊರಿಗೆ ಬಂದಿರುತ್ತೇನೆ.

6. ನಂತರ ದಿನಾಂಕ:06/08/2020 ರವರಿಗೆ ಬೆಳಗ್ಗೆ ಯಾದಗಿರಿಯ ಡಿ.ಡಿ.ಪಿ.ಐ ಆಫೀಸ ಹತ್ತಿರ ರೋಡಿನಲ್ಲಿ, ಶ್ರೀ ಸಿದ್ದನಗೌಡ ಪಾಟೀಲ ರವರು ಕಾರಿನಲ್ಲಿ ಬರುವಾಗ ಬೇಟಿ ಮಾಡಿದ್ದು, ಆಗ ಅವರು ಲಂಚದ ಹಣದ ಬಗ್ಗೆ ವಿಚಾರಿಸಿದರು. ಮತ್ತು 30,000/- ರೂ ಲಂಚದ ಹಣಕ್ಕೆ ಮತ್ತೆ ಡಿಮಾಂಡ, ಮಾಡಿದಾಗ ನಾನು ಅಷ್ಟ ಹಣ ಕೊಡಲು ಆಗುವುದಿಲ್ಲ 25,000/- ರೂ ಕೊಡುತ್ತೇನೆಂದಾಗ, ಅವರು ಇಲ್ಲಾ ನಾನು ಡಿ.ಹೆಚ್.ಓ ರವರಿಗೆ ಕೊಡಬೇಕಾಗುತ್ತದೆ. ನೀನು ಹೋಗಿ ಡಿ.ಹೆಚ್.ಓ ರವರಿಗೆ, ಬೇಟಿ ಆಗು ಅಂತಾ ಹೇಳಿ ಕಳಿಸಿರುತ್ತಾರೆ. ಅದರ ಪ್ರಕಾರ ನಾನು ಶ್ರೀ ಎಂ.ಎಸ್. ಪಾಟೀಲ ಡಿ.ಹೆಚ್.ಓ ರವರಿಗೆ ಅವರ ಚೆಂಬರಿನಲ್ಲಿ ಬೇಟಿ ಮಾಡಿ, ಸರ್, ಶ್ರೀ ಸಿದ್ದನಗೌಡ ಪಾಟೀಲ ರವರು 30,000/- ಕೇಳುತ್ತಿದ್ದಾರೆ... ನನಗೆ ಅಷ್ಟು ಹಣ ಕೊಡಕಾಗಲ್ಲ 25,000/- ಕೊಡುತ್ತೇನೆಂದಾಗ, ಸರಿ ಓಕೆ ಅಮ್ಮ ನಾನು ಮಾತಾಡಿ ಹೇಳ್ತಿನಿ ಅಂತಾ ಅಂದ್ರು.

7. ನಂತರ ದಿನಾಂಕ:06/08/2020 ರಂದು 7:43 ಪಿ.ಎಮ್ ಸುಮಾರಿಗೆ ನಾನು ನಮ್ಮೂರ ಇಬ್ರಾಹಿಂಪೂರದಲ್ಲಿದ್ದಾಗ ಶ್ರೀ ಸಿದ್ದನಗೌಡ ಪಾಟೀಲ ಇವರ ಮೋಬೈಲ ನಂ: 9448618261 ನ್ದೆದ್ದಕ್ಕೆ ನನ್ನ ಮೋಬೈಲ ನಂ: 7619353364 ಕರೆ ಬಂದಿದ್ದು ಲಂಚದ ಹಣದ 25,000/- ರೂ ಯನ್ನು ನಾನು ನಾಳೆ ಇಬ್ರಾಹಿಂಪೂರ ಕ್ರಾಸ ಹತ್ತಿರ ಬರುತ್ತೇನೆ, ಅಲ್ಲೆ ತಂದು ಕೊಡು ಬನ್ನಿ ಅಂತಾ ಸಿದ್ದನಗೌಡ ಪಾಟಿಲ ರವರು ತಿಳಿಸಿರುತ್ತಾರೆ. ಈ ಸಂಬಾಷಣೆ ನನ್ನ ಮೋಬೈಲ ಮೆಮರಿ ಕಾರ್ಡಿನಲ್ಲಿ ದಾಖಲಾಗಿರುತ್ತದೆ.

೮.	ದಿಃ **07-೦೮-2020** ರಂದು ಬೆಃ **7-00** ಕ್ಕೆ ನನಗೆ ಸ್ಟಾಫ್ ನರ್ಸ ಹುದ್ದೆಗೆ ಆಯ್ಕೆ ಮಾಡಲು ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ನಾನು ಬ್ರಷ್ಟಾಚಾರ ನಿಗ್ರಹದಳ ಠಾಣೆ ಯಾದಗಿರಿ ಇಲ್ಲಿಗೆ ಗಣಕಯಂತ್ರದಲ್ಲಿ ಕನ್ನಡದಲ್ಲಿ ಬೆರಳಚ್ಚು ಮಾಡಿದ ದೂರನ್ನು ದಾಖಲಿಸಿರುತ್ತೆನೆ. ಸಾಕ್ಷಿಗೆ ಕಡತದಲ್ಲಿನ ದೂರು ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಇಬ್ಬರು ಆರೊಪಿತರನ್ನು ನೊಡಿ ಸಾಕ್ಷಿ ಗುರುತಿಸುತ್ತಾರೆ.

9.	ನಂತರ ಅದೆ ದಿನ ಬೆಳಗ್ಗೆ 08:00 ಗಂಟೆಯ ಸುಮಾರಿಗೆ ಶ್ರೀ ಗುತ್ತಪ್ಪಗೌಡ ಸಿ.ಪಿ.ಸಿ ಎ.ಸಿ.ಬಿ ಯಾದಗಿರಿ ರವರಿಗೆ ಶ್ರೀ ಗುರುಪಾದ ಬಿರಾದಾರ ಪಿ.ಐ ಎ.ಸಿ.ಬಿ ಯಾದಗಿರಿ ರವರು ಅವರಿಗೆ ಕರೆದು, ತನಿಖೆಯಲ್ಲಿ ಸಹಕರಿಸಲು ಇಬ್ಬರು ಸರ್ಕಾರಿ ನೌಕರರಿಗೆ ಪಂಚರಾಗಿ ಕರೆದುಕೊಂಡು ಬರಲು ಪತ್ರ ಕೊಟ್ಟು ಕಳಿಸಿದ್ದರು, ಆದರಂತೆ, ಪಂಚರಾಗಿ 1) ಶ್ರೀಮತಿ ಅಕ್ಕಮಹಾದೇವಿ ಗಂಡ ಶಿವನಗೌಡ ಪೂಜಾರಿ ಉಎಸ್.ಡಿ.ಎ ಆರ್.ಟಿ.ಓ ಕಛೇರಿ ಯಾದಗಿರಿ ಮತ್ತು 2] ಶ್ರೀ ರವಿ ತಂದೆ ಶಿವರಾಯ ಕೋಡ್ಲಿ ಉ: ಎಫ್.ಡಿ.ಎ ಉಪ-ನೋಂಧಣಾಧಿಕಾರಿಗಳ ಕಛೇರಿ ಯಾದಗಿರಿ ಇವರು ಬೆಳಗ್ಗೆ 09:45 ಗಂಟೆಗೆ ಸುಮಾರಿಗೆ ಬಂದು ಹಾಜರಾಗಿರುತ್ತಾರೆ. ನಂತರ ಶ್ರೀ ಗುರುಪಾದ ಬಿರಾದಾರ, ಪಿ.ಐ ಎ.ಸಿ.ಬಿ ಯಾದಗಿರಿ ರವರು ಅವರಿಗೆ ಬರಮಾಡಿಕೊಂಡು, ತಮ್ಮ ಪರಿಚಯ ಮಾಡಿಕೊಂಡು ನನಗೆ ಪರಿಚಯಿಸಿ, ನಾನು ಯಾದಗಿರಿ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹದಳ ಪೊಲೀಸ ಠಾಣೆಯ ಗುನ್ನೆ ನಂ:02/2020 ಕಲಂ 7(1) ಪಿಸಿ ಅಕ್ಷ 1988 ನ್ನೆದ್ದರಲ್ಲಿ ಫಿರ್ಯಾದಿದಾರಾಗಿದ್ದು ಅವರಿಗೆ ವಿಚಾರಿಸಿ ಈ ಪ್ರಕರಣದಲ್ಲಿ ಹಣ ವಹಿಸಿಕೊಡುವ ಪಂಚನಾಮೆ ಮಾಡಿಸಿಕೊಡಬೇಕೆಂದು ಕೋರಿಕೊಂಡಿದ್ದು. ನಂತರ ನನ್ನ ಹೆಸರು ವಿವರ ಮೇಲಿನಂತೆ ದೂರಿನ ವಿಷಯ ತಿಳಿಸಿರುತ್ತೇನೆ.

10.	ನಂತರ ನಾನು ಹಾಜರ ಪಡಿಸಿದ ಮೋಬೈಲನ ಮೆಮರಿ ಕಾರ್ಡಿನಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಶ್ರೀ ವಿಜಯಕುಮಾರ ಸಿ.ಹೆಚ್.ಸಿ ರವರು ಲ್ಯಾಪ ಟಾಪಿಗೆ ವರ್ಗಾಯಿಸಿ ಪಂಚರಿಗೆ ಕೇಳಿಸಿದ್ದು ಅದರಲ್ಲಿ ಫಿರ್ಯಾದಿಯೊಂದಿಗೆ ಡಾ:ಸಿದ್ದನಗೌಡ ಪಾಟೀಲ ರವರು 25,000/- ರೂ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು ಅಲ್ಲದೆ ದಿನಾಂಕ:07/08/2020 ರಂದು ಇಬ್ರಾಹಿಂಪೂರ ಕ್ರಾಸನಲ್ಲಿ ಬರುವ ಬಗ್ಗೆ ತಿಳಿಸಿದ್ದು ಇತರೆ ಸಂಭಾಷಣೆ ದಾಖಲಾಗಿರುತ್ತದೆ. ನಂತರ ತನಿಖಾಧಿಕಾರಿಯವರು ಸಿಬ್ಬಂದಿಯವರಾದ ಅಮರನಾಥ ಇವರ ಸಹಾಯದಿಂದ ಪ್ರತ್ಯೇಕವಾಗಿ ಬರೆಯಲು ತಿಳಿಸಿದರು.

11.	ನಂತರ ಪಂಚರು ನನಗೆ, ಆಪಾದಿತ ಡಾ:ಸಿದ್ದನಗೌಡ ಪಾಟೀಲ ಇವರಿಗೆ, ಕೊಡಲು ತಂದಿರುವ ಲಂಚದ ಹಣವನ್ನು ಹಾಜರ ಪಡಿಸಲು ಕೇಳಿಕೊಂಡಾಗ ನನ್ನ ಹತ್ತಿರ ಇದ್ದ 500 /- ರೂ ಮುಖ ಬೆಲೆಯುಳ್ಳ 22 ನೋಟುಗಳು ಒಟ್ಟು ರೂ 11,000/-ಮತ್ತು 2000/- ರೂ ಮುಖ ಬೆಲೆಯ 14,000/- ರೂ ಒಟ್ಟು ರೂ. 25000/- ಹಾಜರ ಪಡಿಸಿರುತ್ತೇನೆ. ಚಾಸಾಃ 17 ರವಿ ಕೂಡ್ಲಿ ಇವರು, ನೋಟನ ನಂಬರ ನೋಡಿ ಓದಿ

ಹೇಳಿದಂತೆ ಇನ್ನೊಬ್ಬ ಪಂಚರಾದ ಶ್ರೀಮತಿ ಅಕ್ಕಮಹಾದೇವಿ ರವರು ಗಣಕಯಂತ್ರದಲ್ಲಿ ವಿಜಯಕುಮಾರ ಸಿ.ಹೆಚ್.ಸಿ ರವರಿಂದ ಟೈಪ ಮಾಡಿಸಿದರು ಸದರಿ ನೊಟುಗಳನ್ನು ನೊಡಿದರೆ ಗುರುತಿಸುತ್ತೆನೆ.

12. ನಂತರ ತನಿಖಾಧಿಕಾರಿಯವರು ಎ.ಸಿ.ಬಿ ಕಛೇರಿಯಲ್ಲಿನ ಎರಡು ಚಿಕ್ಕ ಪ್ಲಾಸ್ಟಿಕ್ ಡಬ್ಬಿಗಳನ್ನು ತೊರಿಸಿ ಆ ಡಬ್ಬಿಯಲ್ಲಿ ಒಂದರಲ್ಲಿ ಫಿನಾಲಿನ್ ಪೌಡರ ಮತ್ತು ಇನ್ನೊಂದು ಡಬ್ಬಿಯಲ್ಲಿ ಸೋಡಿಯಂ ಕಾರ್ಬೋನೆಟ್ ಇದ್ದುದ್ದರ ಬಗ್ಗೆ ತಿಳಿಸಿ ಸೋಡಿಯಂ, ಕಾರ್ಬೋನೆಟನ್ನು ಶುದ್ಧವಾದ ನೀರಿನೊಂದಿಗೆ ದ್ರಾವಣ ತಯಾರಿಸಲು ಬಳಸುವದಾಗಿ ಹಾಗೂ ಒಂದು ಬಾಟಲಿಯನ್ನು ತೋರಿಸಿ ಇದರಲ್ಲಿ ಶುದ್ಧ ನೀರು ಇರುತ್ತದೆ ಅಂತಾ ತಿಳಿಸಿ, ಅದನ್ನು ದ್ರಾವಣ ತಯಾರಿಸಲು ಬಳಸುವುದಾಗಿ ಪಂಚರಿಗೆ ಮನವರಿಕೆ ಮಾಡಿಕೊಟ್ಟರು. ಸದರಿ ಶುದ್ಧ ನೀರನ್ನು ಸ್ಯಾಂಪಲ ಕುರಿತು ಪ್ರತ್ಯೇಕವಾದ ಗಾಜಿನ ಬಾಟಲಿಯಲ್ಲಿ ಶ್ರೀ ಮರೆಪ್ಪ ಹೆಚ್.ಸಿ ಎ.ಸಿ.ಬಿ. ಪೊಲೀಸ್ ಠಾಣೆ ಕಲಬುರಗಿ ರವರಿಂದ ಹಾಕಿಸಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ "CL' ಅಂತಾ ಅರಗಿನಿಂದ ಇಂಗ್ಲೀಷನಲ್ಲಿ ಸೀಲ ಮಾಡಿ, ಚಿಕ್ಕ ಬಿಳಿ ಹಾಳೆಯ ಮೇಲೆ ವಿವರಣೆಯನ್ನು ಬರೆದು ಅದರ ಮೇಲೆ ನಾವು ಪಂಚರು ಹಾಗು ತನಿಖಾಧಿಕಾರಿಯವರು ಸಹಿ ಮಾಡಿದ್ದು ಅದನ್ನು ಬಾಟ್ಲಗೆ ಅಂಟಿಸಿ ಅದಕ್ಕೆ ಆರ್ಟಿಕಲ್ ನಂಬರ -1 ಅಂತಾ ಗುರುತಿಸಲಾಯಿತು. ಅದನ್ನು ನೊಡಿದರೆ ಗುರತಿಸುತ್ತೆನೆ. ಒಂದು ಬಿಳಿ ಬಟ್ಟೆಬಾಯಿ ಸಿಲ್ ಮಾಡಲಾದ ಒಂದು ಗಾಜಿನ ಬಾಟಲಿಯನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದರಲ್ಲಿ ಶುದ್ಧ ನೀರು ಇರುತ್ತದೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

13. ನಂತರ ತನಿಖಾಧಿಕಾರಿಯವರು ರಾಸಾಯನಿಕ ಪ್ರಕ್ರಿಯೆಗೆ ಬಳಸಬೇಕಾದ ಪಿನಾಪ್ಸಲಿನ್ ಪೌಡರ ಮತ್ತು ಸೊಡಿಯಂ ಕಾರ್ಬೋನೇಟ್ ಪೌಡರಗಳನ್ನು ಮಾದರಿ ಸ್ಯಾಂಪಲ್ ಆಗಿ ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯೇಕವಾಗಿ ಎರಡು ಬಿಳಿ ಹಾಳೆಯಲ್ಲಿ ಹಾಕಿ ಚೀಟಿ ಕಟ್ಟಿ ನಂತರ ಒಂದು ಕಾಗದದ ಕವರಿನಲ್ಲಿ ಹಾಕಿ ಪ್ಯಾಕ್ ಮಾಡಿ ಅವುಗಳನ್ನು ಎರಡು ಪ್ರತ್ಯೇಕವಾಗಿ ಹಾಕಿ "CL" ಅಂತಾ ಅರಗಿನಿಂದ ಇಂಗ್ಲೀಷಿನಲ್ಲಿ ಸೀಲ ಮಾಡಿ, ಚಿಕ್ಕ ಬಿಳಿ ಹಾಳೆಯ ಮೇಲೆ ವಿವರಣೆಯನ್ನು ಬರೆದು ಅದರ ಮೇಲೆ ಪಂಚರು ಹಾಗು ತನಿಖಾಧಿಕಾರಿಯವರು ಸಹಿ ಮಾಡಿದ್ದು ಅದನ್ನು ಕವರಿಗೆ ಅಂಟಿಸಿ, ಪಿನಾಪ್ಸಲಿನ್ ಪೌಡರ ಸಂಗ್ರಹಿಸಿದ ಸ್ಯಾಂಪಲಿಗೆ ಆರ್ಟಿಕಲ್ ನಂ-2 ಅಂತಾ ಮತ್ತು ಸೋಡಿಯಂ ಕಾರ್ಬೋನೆಟ್ ಪೌಡರ ಸಂಗ್ರಹಿಸಿದ ಸ್ಯಾಂಪಲ್ ಪಾಕೇಟಕ್ಕೆ ಆರ್ಟಿಕಲ್ ನಂ-3 ಅಂತಾ ಗುರುತಿಸಲಾಯಿತು. ಅವುಗಳನ್ನು ನೊಡಿದರೆ ಗುರುತಿಸುತ್ತೆನೆ.

14. ನಂತರ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿ ಶ್ರೀ ಮರೆಪ್ಪ ಹೆಚ್.ಸಿ ಎ.ಸಿ.ಬಿ ಪೊಲೀಸ್ ಠಾಣೆ ಕಲಬುರಗಿ ರವರಿಗೆ ಲಂಚದ ಹಣದ ನೋಟುಗಳಿಗೆ ಎರಡು ಬದಿಗೆ ತೆಳುವಾಗಿ ಪಿನಾಪ್ತಲೀನ್ ಪೌಡರನ್ನು ಸವರಿ ಪಂಚ ಸಾಕ್ಷಿ ಯಾದ ರವೀಕೂಡ್ಲಿ ಇವರ ಕೈಯಲ್ಲಿ ಕೊಡಲು ತಿಳಿಸಿದಂತೆ ಮರೆಪ್ಪ ಹೆಚ್.ಸಿ ರವರು ನೋಟುಗಳಿಗೆ ಪಿನಾಪ್ತಲಿನ್ ಸವರಿದ ಲಂಚದ ಹಣವನ್ನು ಅವರ ಕೈಗೆ ಕೊಟ್ಟರು. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ನೋಟುಗಳನ್ನು ತಮ್ಮ ಎರಡೂ ಕೈಗಳಿಂದ ಎಣಿಸಿ ನನ್ನ ಪರ್ಸಿನಲ್ಲಿ ಶೋದಿಸಿ ಏನೂ ಇಲ್ಲವೆಂದು ಪರಿಶೀಲಿಸಿ ಸದರಿ ಹಣವನ್ನು ರೂ 25,000/- ರೂಪಾಯಿಯನ್ನು ಫರ್ಸಿನಲ್ಲಿ ಇಟ್ಟರು.

15. ನಂತರ ಅಮರನಾಥ ಸಿ.ಪಿ.ಸಿ ಇವರು ತಯಾರಿಸಿದ ಗಾಜಿನ ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಪಂಚಸಾಕ್ಷಿಯಾದ ರವೀ ಕೂಡ್ಲಿ ಇವರ ಎರಡೂ ಕೈಗಳ ಬೆರಳುಗಳನ್ನು ಅದ್ದಿ ತೊಳೆಯಿಸಲಾಗಿ ಬಣ್ಣ ರಹಿತವಾಗಿದ್ದ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಖಾಲಿ ಗಾಜಿನ ಬಾಟಲಿಯಲ್ಲಿ ಹಾಕಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅದರ ಮೇಲೆ "CL" ಅಂತಾ ಅರಗಿನಿಂದ ಇಂಗ್ಲೀಷಿನಲ್ಲಿ ಸೀಲ ಮಾಡಿದ, ಚಿಕ್ಕ ಬಿಳಿ ಹಾಳೆಯ ಮೇಲೆ ವಿವರಣೆಯನ್ನು ಬರೆದು ಅದರ ಮೇಲೆ ಪಂಚರು ಹಾಗು ತನಿಖಾಧಿಕಾರಿಯವರು ಸಹಿ ಮಾಡಿದ್ದು ಅದನ್ನು ಬಾಟ್ಲಿಗೆ ಅಂಟಿಸಿ ಅದಕ್ಕೆ ಆರ್ಟಿಕಲ್ ನಂಬರ-4 ಅಂತಾ ಗುರುತಿಸಲಾಯಿತು. ಒಂದು ಬಿಳಿ ಬಟ್ಟೆಬಾಯಿ ಸಿಲ್ ಮಾಡಲಾದ ಒಂದು ಗಾಜಿನ ಬಾಟಲಿಯನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದರಲ್ಲಿ ಗುಲಾಬಿ ಬಣ್ಣದ ದ್ರಾವಣ ಇರುತ್ತದೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-2 ಎಂದು ಗುರುತಿಸಲಾಯಿತು.

16. ನಂತರ ತನಿಖಾಧಿಕಾರಿಯವರು ನಮಗೆ ತಿಳಿಸಿದ್ದೇನೆಂದರೆ, ಆಪಾದಿತ ನೌಕರನು ಪಿರ್ಯಾದಿಯಿಂದ ಲಂಚದ ಹಣ ಪಡೆದುಕೊಂಡಿದ್ದೇ ಅದಲ್ಲಿ, ಇದೇ ರೀತಿ ಅವನ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿದಾಗ ಬಣ್ಣ ರಹಿತವಾದ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಅಂತಾ ಮನವರಿಕೆ ಮಾಡಿಕೊಟ್ಟರು.

17. ತನಿಖಾಧಿಕಾರಿಯವರು ಆರ್ಟಿಕಲ್ ನಂ 1 ರಿಂದ 4 ನ್ನೆದ್ದವನ್ನು ಮತ್ತು ಪಿನಾಲಿನ್ ಪುಡಿ ಇರುವ ಡಬ್ಬಿಯನ್ನು ತಮ್ಮ ಕಛೇರಿಯ ಕೋಣೆಯಲ್ಲಿಟ್ಟು ಕೀಲಿ ಹಾಕಿದರು. ನಂತರ ನನಗೆ ಆಪಾದಿತನ ಲಂಚದ ಹಣ 25,000/- ರೂಪಾಯಿ ಕೊಡಲು ಕೇಳಿದಾಗ ಮಾತ್ರ ಅವನ ಕೈಗೆ ಕೊಡಲು ತಿಳಿಸಿದರು. ಒಂದು ವೇಳೆ ಆರೋಪಿತ ಲಂಚದ ಹಣವೆಂದು ಕೇಳಿ ಬೇರೆಯವರ ಕೈಗೆ ಕೊಡುವಂತೆ ಆಥವಾ ಬೇರೆ ಯಾವದೇ ಸ್ಥಳದಲ್ಲಿ ಇಟ್ಟು ಹೋಗಲು ತಿಳಿಸಿದಾಗ ಮಾತ್ರ ಅವನು ಹೇಳಿದಂತೆ ಹಣವನ್ನು ಕೊಟ್ಟು ನಂತರ, ಹೊರಗಡೆ ಬಂದು ಹಾಕಿಕೊಂಡ ಮಾಸ್ಕನ್ನು ಕೈಯಿಂದ ತೆಗೆದು ಕೈಯಲ್ಲಿ ಹಿಡಿಯುವ ಮೂಲಕ ಸಂಜ್ಞೆ ಮಾಡುವಂತೆ ತಿಳುವಳಿಕೆ ಕೊಟ್ಟರು ಹಾಗೂ ಲಂಚದ ಹಣ ಕೊಡುವ ವೇಳೆ ಸೋನಿ ವೈಸ್ ರಿಕಾರ್ಡರದಲ್ಲಿ ರಿರ್ಕಾಡ್ ಮಾಡಲು ಸೂಕ್ತ ತಿಳುವಳಿಕೆ ಕೊಟ್ಟರು.

18. ನಂತರ ಆರೋಪಿಗೆ ರೂ 25,000/- ಲಂಚದ ಹಣ ಕೊಡುವಾಗ, ಆರೋಪಿ ನೌಕರನ ಮಧ್ಯ ನಡೆಯುವ ಸಂಭಾಷಣೆಯನ್ನು ಕೇಳಿ ಲಂಚದ ಹಣ ಪಡೆಯುವದನ್ನು ನೋಡಿ ನಂತರ ಕೇಳಿದಾಗ ತಿಳಿಸುವಂತೆ ನನಗೆ ಮತ್ತು ಆ ದಿವಸ ನೆರಳು ಸಾಕ್ಷಿಯಾಗಿದ್ದ ಶ್ರೀಮತಿ ಅಕ್ಕಮಹಾದೇವಿ ಇವರಿಗೆ ತಿಳಿಸಿದರು.

19. ನಂತರ ಅವರುಗಳು ತಮ್ಮ ಕೈಗಳನ್ನು ಸಾಬೂನಿನ ನೀರಿನಿಂದ ಸ್ವಚ್ಛವಾಗಿ ತೊಳೆದುಕೊಂಡರು. ಕೇಸಿನ ಮುಂದಿನ ತನಿಖೆಗಾಗಿ ತನಿಖಾ ಸಾಮುಗ್ರಿಗಳನ್ನು ತಯಾರು ಮಾಡಿಕೊಂಡರು. ಎರಡು ಇಲಾಖಾ ವಾಹನಗಳನ್ನು ತಯಾರು ಮಾಡಿಕೊಂಡಿರುತ್ತಾರೆ. ಅದೆ ದಿನ ಹಣವಹಿಸಿಕೊಡುವ ಪಂಚನಾಮೆಯನ್ನು ಬೆಳಿಗ್ಗೆ 10:00 ಗಂಟೆಯಿಂದ 11:00 ಗಂಟೆಯವರೆಗೆ ಮುಗಿಸಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಹಣ ವಹಿಸಿಕೊಡುವ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಗುತ್ತಪ್ಪಗೌಡ

ರವರು ಪೋಟೋಗ್ರಾಫಿ ಮಾಡಿರುತ್ತಾರೆ. ಸಾಕ್ಷಿಗೆ 10 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ಹಣ ವಹಿಸಿಕೊಡುವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ. 3 ರಿಂದ 12 ಎಂದು ಗುರುತಿಸಲಾಯಿತು. ವಿಜಯಕುಮಾರ ಸಿ.ಹೆಚ್.ಸಿ ರವರು ಲ್ಯಾಪಟಾಪದಲ್ಲಿ ಬೆರಳಚ್ಚು ಮಾಡಿರುತ್ತೆನೆ.

( ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಕಾಲಾವಕಾಶ ಕೊರಿದ್ದು ಅನೂಮತಿಸಿ ಮುಂದುಡಲಾಯಿತು.)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.